# ವೇದೋಕ್ತಿಗಳಲ್ಲಿ ಪಾಠಗಳು

**ಮೊದಲನೆಯ ಭಾಗ**

## STUDIES IN THE SCRIPTURES

**"ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ."**

**SERIES I**

# ಯುಗಾಂತರಗಳ ಯೋಜನೆ

# The Plan of the Ages

ದೈವೀಕ ಗುಣದ ಮತ್ತು ಸರ್ಕಾರದ ಒಂದು ಸಮರ್ಥನೆ: ಎಲ್ಲಾ ವೇದ ವಾಕ್ಯಗಳನ್ನು ಗಮನಿಸುವ ಮತ್ತು ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಹಿಂದೆ ಮತ್ತು ಈಗ ಕೆಟ್ಟದಕ್ಕೆ ನೀಡಲಾಗಿರುವ ಅನುಮತಿಯು ಶಿಕ್ಷಣಪೂರ್ವಕವಾಗಿದೆ ಮತ್ತು **ಪ್ರವಾದನೆಯ ಸುವರ್ಣ ಯುಗಕ್ಕೆ** ಮಾನವರನ್ನು ಕೊಂಡೊಯ್ಯುವುದಕ್ಕೆ ಪೂರ್ವ ಸಿದ್ಧತೆಯಾಗಿದೆ ಎಂದುಕಂಡುಬರುತ್ತದೆ. ಆ ಯುಗದಲ್ಲಿ ಭೂಮಿಯ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು ಅವರಿಗೆ ದೇವರ ಬಗೆಗಿನ ಸಂಪೂರ್ಣವಾದ ಜ್ಞಾನ ಹೊಂದುವ ಮತ್ತು ವಿಮೋಚಕನ ಮೂಲಕ ನಿತ್ಯ ಜೀವ ಹೊಂದುವ ಪೂರ್ಣ ಅವಕಾಶದ ಆಶೀರ್ವಾದ ದೊರೆಯುವುದು. ಆ ವಿಮೋಚಕನು ಆಗ ಉಜ್ಜೀವಿಸ ಮಾಡುವವನು ಮತ್ತು ಜೀವಿದಾಯಕನು ಆಗಿರುವನು.

ಅ.ಕೃ 3 : 19–21

*Reprinted in 2017*

*(Abbreviated Edition*
*Complete copy available in English)*

**THE BANGALORE BIBLE STUDENTS**
No. 149, 2nd Floor, Ejipura Main Road,
Vivek Nagar, Bangalore - 560 047. Email : bangalorebiblestudents@yahoo.com

# To the King of Kings and Lord of Lords

IN THE INTEREST OF

HIS CONSECRATED SAINTS,

WAITING FOR THE ADOPTION,

—AND OF—

"ALL THAT IN EVERY PLACE CALL UPON THE LORD,"
"THE HOUSEHOLD OF FAITH,"

—AND OF—

THE GROANING CREATION, TRAVAILING AND WAITING FOR THE MANIFESTATION OF THE SONS OF GOD,

## THIS WORK IS DEDICATED.

---

"To make all see what is the fellowship of the mystery which from the beginning
of the world hath been hid in God." "Wherein He hath abounded toward
us in all wisdom and prudence, having made known unto us the
mystery of His will, according to His good pleasure which
He hath purposed in Himself; that in the dispensation
of the fulness of the times He
might gather together in one all
things, under Christ."
***Eph. 3:4,5,9;1:8-10***

---

Written in 1886 by Pastor Russell

---

# ಪ್ರಕಾಶಕರ ಮುನ್ನುಡಿ

ಒಂದು ಸಾಂದರ್ಭಿಕ ಪುಸ್ತಕವು ತನ್ನ ಸಮಯವನ್ನು ದಾಟಿ ಅನೇಕ ತಲೆಮಾರಿನವರೆಗೂ ಅರ್ಥಪೂರ್ಣವಾಗಿ ಮಾತಾಡುವುದನ್ನು ಮುಂದುವರಿಸುತ್ತದೆ. ಆ ಮೂಲಕ ಅದು ಒಂದು ಶ್ರೇಷ್ಠ ಕೃತಿಯಾಗುತ್ತದೆ.

ಯುಗಯುಗಾಂತರಗಳ ದೈವೀಕ ಯೋಜನೆ ಎಂಬ ಪುಸ್ತಕವು ಆಧುನಿಕ ಧಾರ್ಮಿಕ ಶ್ರೇಷ್ಠ ಕೃತಿಯಾಗಿದೆ. ಮೌನವಾಗಿಯೇ ಅದರ ಪ್ರಸರಣೆಯು 8,000,000 ಸಾಲು ಸಾಗಿದೆ ಮತ್ತು ವರ್ಷದಿಂದ ವರ್ಷಕ್ಕೆ ಅದು ನಿರಂತರವಾಗಿ ಹೆಚ್ಚುತ್ತಲೇ ಇದೆ. ಆದಾಗ್ಯೂ ಅದರ ಪ್ರಸರಣೆ ಮಾತ್ರವೇ ಅದರ ಪ್ರಭಾವದ ವ್ಯಾಪ್ತಿಯನ್ನು ಸೂಚಿಸುವುದಿಲ್ಲ. ಈ ಕೃತಿಯು ಹೊಸ ವಿಚಾರ ಮತ್ತು ಪರಿಕಲ್ಪನೆಗಳನ್ನು ಒಳಗೊಂಡಿದೆ. ದೇವರ ಮಹೋನ್ನತ ಯೋಜನೆಯ ವಿಸ್ತಾರವಾದ ನೋಟವನ್ನು ಪ್ರಕಟಿಸಿರುವ ವೇದಗಳ ಸರಣಿ ಸಾಕ್ಷಿಯನ್ನು ಇದು ನೀಡುತ್ತದೆ. ಈ ಪುಸ್ತಕವು ಸತ್ಯವೇದದ ಯುಗಗಳ ವಿಭಾಗವನ್ನು ಮತ್ತು ಪ್ರತಿಯೊಂದರಲ್ಲಿ ದೇವರ ನಡೆಸುವಿಕೆಯನ್ನು ಸುಲಭವಾಗಿ ಗುರುತಿಸಲು ಓದುಗರಿಗೆ ಸಹಾಯ ಮಾಡುತ್ತದೆ. ಯಾಕೆಂದರೆ ಇದರಿಂದಲೇ ಅನೇಕರು ಸತ್ಯವೇದವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಇಂದಿನ ಆಸಕ್ತ ಓದುಗರ ನಡುವೆ ಅದು "ಸತ್ಯವೇದದ ಕೀಲಿ" ಎಂದು ಪ್ರಸಿದ್ಧವಾಗಿದೆ.

ಯುಗಯುಗಾಂತರಗಳ ದೈವೀಕ ಯೋಜನೆ ಎಂಬ ಪುಸ್ತಕವು ಹೊಸ ಪುಸ್ತಕವೇನಲ್ಲ. ಅದು 1886ರಲ್ಲಿ ಬರೆಯಲ್ಪಟ್ಟಿತು. ಅದರ ಭಾವ ಮತ್ತು ಒಳಗಿರುವ ವಿಷಯ ಆ ದಿನದ ಬೋಧನೆಗೆ ತದ್ವಿರುದ್ಧವಾಗಿತ್ತು.

ಸಭೆಗಳು ವಿಸ್ತಾರವಾಗಿ ಸಾಕ್ಷಿ ಸಾರಲು ಮತ್ತು ಪ್ರಪಂಚವನ್ನು ಜಯಿಸಲು ಸಿದ್ಧತೆ ಮಾಡಿಕೊಂಡವು. ಆದರೆ ಧಾರ್ಮಿಕ ಹಾಗೂ ಸತ್ಯವೇದದ ಉನ್ನತ ಟೀಕೆಗಾರರು ಬಲವಾದ ಆಕ್ರಮಣದಿಂದ ಅವರನ್ನು ಆಶ್ಚರ್ಯಗೊಳಿಸದರು, ಅವರ ಈ ಆಕ್ರಮಣಗಳಿಗೆ ಬುದ್ಧಿವಂತ ಉತ್ತರಗಳನ್ನು ನೀಡುವಲ್ಲಿ ಇವರು ವಿಫಲವಾದರೂ ಸತ್ಯವೇದವು ದೈವಪ್ರೇರಿತ ನುಡಿ ಎಂಬುದರ ಬಗ್ಗೆ ಅನೇಕರ ವಿಶ್ವಾಸವನ್ನು ಕಳೆದುಕೊಳ್ಳುವ ಹಾಗಾಯಿತು. ಯುಗಯುಗಾಂತರಗಳ ದೈವೀಕ ಯೋಜನೆ ಎಂಬ ಪುಸ್ತಕವು ತೀವ್ರಾಸಕ್ತ ಕ್ರೈಸ್ತರಿಗೆ ಅವಿಶ್ವಾಸದ ಅಭಿಪ್ರಾಯಗಳನ್ನು ತೆಗೆದುಹಾಕಲು ಹಾಗೂ ಅವಿಶ್ವಾಸಿಗಳಿಗೆ ನಂಬಲು ಆಧಾರವನ್ನು ಒದಗಿಸುವಲ್ಲಿ ಸಹಾಯಮಾಡಿತು.

ಲೇಖಕರು ಗಣನೀಯ ಸ್ಪಷ್ಟತೆಯಲ್ಲಿ ಲೋಕಪ್ರಸಿದ್ಧವಾಗ ವಿಷಯ – 'ಇಕ್ಕಟ್ಟಿನ ಸಮಯ'ವನ್ನು ವಿವರಿಸಿದ್ದಾರೆ. ಇತರರು ಸಮಾಧಾನದ ವಿಷಯವಾಗಿ ಮಾತಾಡಿದರೂ ಇವರೇ ಧೈರ್ಯದಿಂದ ಯುದ್ಧ, ಕ್ರಾಂತಿ, ಅರಾಜಕತೆಗಳಿಂದಾಗುವ ಸಂಕಟಗಳು ಹಗೂ ಅವು ಲೋಕದ ಸರ್ಕಾರಗಳ ಪತನದಲ್ಲಿ ಮುಕ್ತಾಯವಾಗುತ್ತದೆ ಎಂದು ಮುಂತಿಳಿಸಿದರು. ಹೇಗೆ 'ಸಂಕಟವು' ಸ್ಪಷ್ಟವಾಗಿ ನಿರೂಪಿಸಲಾಗಿದೆಯೋ ಹಾಗೆಯೇ ಇಂದಿನ ಮತ್ತು ಮುಂದಿನ ಘಟನೆಗಳು – ಸಂಕಟಗಳ ಕಾರ್ಗತ್ತಲಿನ ಕ್ಷಣಗಳನ್ನು ದಾಟಿ ದೇವರ 'ಬರುವ ರಾಜ್ಯದ' ಮಹಿಮೆಗಳವರೆಗೂ ಎಲ್ಲವೂ ಪತ್ತೆಹಚ್ಚಲಾಗಿದೆ.

ನಾವು ಅತ್ಯಮೂಲ್ಯ ನಿಧಿ ಎಂಬಂತೆ ಇದನ್ನು ಯಾವುದೇ ಅಭ್ಯಂತರವಿಲ್ಲದೆ ಶಿಫಾರಸ್ಸು ಮಾಡುತ್ತೇವೆ – ಇದು 19 ಮತ್ತು 20 ಶತಮಾನಗಳ ಅತ್ಯಂತ ವಿಶ್ವಾಸನೀಯ ಮತ್ತು ಗಣನೀಯವಾದ ಧಾರ್ಮಿಕ ಗ್ರಂಥ. ಪ್ರತಿಯೊಬ್ಬ ವಿವೇಕಿಯಾದ ಸತ್ಯವೇದ ಓದುಗನಿಗೂ ಇದು ಫಲದಾಯಕ ಅಧ್ಯಯನವಾಗಿ ಪರಿಣಮಿಸುತ್ತದೆ.

ಪ್ರಕಟಣಾಕಾರರ ಅಡಿಟಿಪ್ಪಣಿಯು ಮೇಲಿನ ಉಲ್ಲೇಖ ಸಂಖ್ಯೆಗಳನ್ನು ಒಳಗೊಂಡಿರುತ್ತದೆ ('); ಮತ್ತು ಬೇರೆ ಎಲ್ಲಾ ಅಡಿಟಿಪ್ಪಣಿಗಳು ಲೇಖಕರದ್ದಾಗಿದೆ.

**ಪ್ರಕಟಣಾಗಾರರು, 1975**

# “ದೈವಿಕವಾದ ಯುಗಯುಗಾಂತರಗಳ ಯೋಜನೆ”

## ಲೇಖಕನ ಪ್ರಸ್ತಾವನೆ

ಈ ಗ್ರಂಥದ ಲೇಖಕ ಮತ್ತು ಪ್ರಕಾಶಕರು, ಈ ಸಂಪುಟದ ಪ್ರಸರಣೆಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಅವಕಾಶ ನೀಡಿದ ದೇವರ ದಯೆಯನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಇಚ್ಛಿಸುತ್ತಾರೆ ಮತ್ತು ಅದರ ಫಲಿತಾಂಶವಾಗಿ – ಬೆಳಕು, ಸಂತೋಷ, ಸಮಾಧಾನ, ದೇವರೊಂದಿಗೆ ಅನ್ಯೋನ್ಯತೆಯು ಅನೇಕ ಹಸಿದವರಿಗೆ, ಬಾಯಾರಿದವರಿಗೆ, ಗೂಂದಲವುಳ್ಳವರಿಗೆ ದೊರೆತಿದೆ. ಮೊದಲ ಮುದ್ರಣ – ಈ ಪ್ರಸ್ತುತ ರೂಪದಲ್ಲಿ 1889ರಲ್ಲಿ ಹೊರತರಲಾಗಿತ್ತು. ಆಗ್ಗಿನಂದಲೂ ಒಂದರ ನಂತರ ಒಂದು ಅನೇಕ ಆವೃತ್ತಿಗಳ (ಮುದ್ರಣಗಳು) ಸಾಲು ಬಹಳ ವೇಗವಾಗಿ ಆಗಿದೆ ಮತ್ತು 20 ವಿವಿಧ ಭಾಷೆಗಳಲ್ಲಿ ಮುದ್ರಣವಾಗಿದೆ, ಈವರೆಗೆ ಸುಮಾರು ಐದು ಮಿಲಿಯನ್ ಪ್ರತಿಗಳು ಪ್ರಪಂಚದಾದ್ಯಂತ ಜನರ ಕೈ ತಲುಪಿದೆ. ಈ ಪುಸ್ತಕಗಳೆಲ್ಲವೂ ಸಂಪೂರ್ಣವಾಗಿ ಓದಲ್ಪಟಿದೆ ಎಂದು ನಿರೀಕ್ಷಿಸಲಾಗಿದು; ಆದರೆ ನಿರಂತರವಾಗಿ ಕೈಸೇರುತ್ತಿರುವ ಪತ್ರಗಳು ಎಲ್ಲಾಕಡೆ ಜನರ ಹೃದಯ ಮತ್ತು ಮನಸ್ಸುಗಳಲ್ಲಿ ಪ್ರಭಲವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂಬ ಭರವಸೆಯನ್ನು ನಮಗೆ ನೀಡುತ್ತದೆ. ಸಾವಿರಾರು ಜನರು ಅದರಿಂದ ನಾವು ಪ್ರಭಾವಿತರಾಗಿದ್ದೇವೆ ಎಂಬುದಾಗಿ ಬರೆಯುತ್ತಾರೆ – ಸತ್ಯವೇದವು ಮನುಷ್ಯರಿಗೆ ಕೊಡಲ್ಪಟ್ಟ ದೈವೀಕ ಪ್ರಕಟಣೆ ಎಂದು ಸಂಪೂರ್ಣವಾಗಿ ನಂಬದವರೂ ಸಹ ಬರೆದಿದ್ದಾರೆ. ಬೇರೆ ಕೆಲವರು ತಾವು ಹಿಂದೆ ಸತ್ಯ ದೇವರನ್ನು ಅರಿಯದ್ದಿದ್ದ ಕಾರಣ ಮತ್ತು ಯುಗಯುಗಾಂತರಗಳ ಆತನ ಯೋಜನೆಯನ್ನು ಅರಿಯದಿದ್ದ ಕಾರಣ ಹಾಗೂ ಧಾರ್ಮಿಕ ಸಿದ್ಧಾಂತಗಳಲ್ಲಿ ತಮ್ಮ ಮುಂದೆ ಇರಿಸುತ್ತಿದ್ದ ವ್ಯಕ್ತಿಗಳನ್ನು ಆರಾಧಿಸಲು ಅಥವ ಗೌರವಿಸಲು ಮತ್ತು ಅಂಗೀಕರಿಸಲು ಅಸಾಧ್ಯವಾಗಿದ್ದರಿಂದ ತಾವು ನಾಸ್ತಿಕರಂತೆ ಆಗಿಹೋಗಿದ್ದೆವು ಎಂದು ಬರೆದಿದ್ದಾರೆ. ಈ ಸಂಪುಟದ ಮೊದಲ ಮುದ್ರಣಕ್ಕೂ ಸುಮಾರು ಐದು ವರ್ಷಕ್ಕೂ ಮೊದಲು ಮೂಲವಾಗಿ ಇದೇ ವಿಷಯಗಳನ್ನೊಳಗೊಂಡ ಮುದ್ರಣವನ್ನು ಮತ್ತೊಂದು ಹೆಸರಿನಲ್ಲಿ, ಭಿನ್ನವಾದ ರೀತಿಯಲ್ಲಿ ಪ್ರಸ್ತಾಪಿಸಲಾಗಿತ್ತು. ಆ ಪುಸ್ತಕಕ್ಕೆ “ಆಲೋಚಿಸುವ ಕ್ರೈಸ್ತರಿಗೆ ಆಹಾರ” ಎಂಬ ಶಿರೋನಾಮ ನೀಡಲಾಗಿತ್ತು. ಅದರ ಶೈಲಿ ಭಿನ್ನವಾಗಿತ್ತು ಅದರಲ್ಲಿ ಮೊದಲಿಗೆ ತಪ್ಪುಗಳ ಮೇಲೆ ಆಕ್ರಮಣ ಮಾಡಿ – ಅದನ್ನು ನಾಶಮಾಡಿ ಅದರ ಸ್ಥಳದಲ್ಲಿ ಸತ್ಯದ ಸೌಧವನ್ನು ನಿಲ್ಲಿಸಲಾಗುತ್ತಿತ್ತು. ಆದರೆ ಅಂತಿಮವಾಗಿ ಇದು ಉತ್ತಮವಾದ ಕ್ರಮವಲ್ಲವೆಂದು ಅರಿತೆವು – ಕೆಲವರು ತಮ್ಮ ತಪ್ಪುಗಳು ಬೀಳುತ್ತಿರುವುದನ್ನು ಕಂಡು ದಿಗಿಲುಗೊಂಡು, ನಾಶಮಾಡಲ್ಪಟ್ಟ ತಪ್ಪುಗಳ ಸ್ಥಳಗಳಲ್ಲಿ ಸುಂದರವಾದ ಸತ್ಯದ ಸೌಧದಮಿನುಗು ನೋಟವನ್ನು ನೋಡುವಷ್ಟಾದರೂ ಓದನ್ನು ಮುಂದುವರಿಸಲು ವಿಫಲರಾದರು.

ಪ್ರಸ್ತುತ ಸಂಪುಟವನ್ನು ವಿರುದ್ಧವಾದ ದೃಷ್ಟಿಕೋನದಿಂದ ಬರೆಯಲಾಗಿದೆ. ಅದು ಸತ್ಯವನ್ನು ಮುಂದಿಡುತ್ತದೆ, ಅದರ ಸಾಮರ್ಥ್ಯ ಮತ್ತು ಸೌಂದರ್ಯವನ್ನು ತೋರಿಸುತ್ತದೆ ನಂತರ ತಪ್ಪುಗಳನ್ನು ತೆಗೆದುಹಾಕಲು ಸಲಹೆ ನೀಡುತ್ತದೆ, ಏಕೆಂದರೆ ಅದು ಅನವಶ್ಯಕ ಮಾತ್ರವಲ್ಲ ಆದರೆ ಸಂಪೂರ್ಣವಾಗಿ ನಿಶ್ಪ್ರಯೋಜಕ ಮತ್ತು ಬಹಳ ಅಸಾಯಕರಿ ಎಂದು ತಿಳಿಸುತ್ತದೆ. ಈ ರೀತಿಯಾಗಿ ದೈವೀಕವಾದ ಯುಗಯುಗಾಂತರಗಳ ಯೋಜನೆಯ ಓದುಗನು ಪ್ರತಿಹಂತದಲ್ಲಿ ನಂಬಿಕೆ ಬಲಹೊಂದುವುದನ್ನು ಮತ್ತು ಇನ್ನೂ ಹೆಚ್ಚು ಕರ್ತನಿಗೆ ಹತ್ತಿರವಾಗುವುದನ್ನು ಕಾಣುವನು ಆ ಮೂಲಕವಾಗಿ ಆತ ಸರಿಯಾದ ಪಥದಲ್ಲಿ ಇರುವನೆಂದ ಭರವಸೆ ಹೊಂದುವನು. ಸತ್ಯವನ್ನು ಕಂಡ ಮೇಲೆ, ತಪ್ಪುಗಳು ಹೆಚ್ಚು ಹೆಚ್ಚು ಅಸಂಬದ್ಧವಾಗಿ, ನಿಶ್ಪ್ರಯೋಜಕವಾಗಿ, ಹಾನಿಕಾರಕವಾಗಿ ಕಾಣುವುದು ಆಗ ಬಹಳ ಸಂತೋಷದಿಂದ ಅವುಗಳು ತ್ಯಜಿಸಲ್ಪಡುವವು.

ಖಂಡಿತವಾಗಿಯೂ ಆ ಮಹಾ ವಿರೋಧಿಗೆ ದೇವರ ಜನರ ಕಣ್ಣುಗಳನ್ನು ತೆರೆಯುವ ದೇವರ ಪುಸ್ತಕದ ಮೇಲೆ ಅವರ ಭಕ್ತಿ ಹೆಚ್ಚಿಸುವ ಮತ್ತು ಮಾನವರ ಧಾರ್ಮಿಕ ಸಿದ್ಧಾಂತಗಳ ಮೇಲೆ ಅವರ ಅವಲಂಬನೆಯನ್ನು ಕಡಿದು ಹಾಕುವ ಯಾವುದರ ಮೇಲೂ ಅವನಿಗೆ ಪ್ರೀತಿ ಇಲ್ಲ. ಆದಕಾರಣ ಆ ಮಹಾ ವಿರೋಧಿಯು ನಾವು ನಿರೀಕ್ಷಿಸಿದ ಹಾಗೆ ಈ ಪುಸ್ತಕಕ್ಕೆ ಬಹಳಷ್ಟು ವಿರೋಧಿಸುತ್ತಾನೆ. ಕೆಲವರು ಮಾತ್ರ ಸೈತಾನನ ಶಕ್ತಿ ಮತ್ತು ವಂಚನೆಯನ್ನು ಅರಿತು ಕೊಳ್ಳುತಾರೆ; ಇದರ ವಿಷಯವಾಗಿ ಅಪೋಸ್ತಲರ ಮಾತುಗಳು–”ಸತ್ಯಕ್ಕೆ ವಿರೋಧವಾಗಿ ಹೋರಾಡಿ ಅದರ ಪ್ರಭಾವವನ್ನು ನಾಶಮಾಡಲು ಅಂಧಕಾರದ ಅಧಿಪತಿಯು ಪ್ರಕಾಶರೂಪವುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುವನು” ಎಂಬುದರ ಅರ್ಥವನ್ನು ಕೆಲವರು ಮಾತ್ರ ಅರಿತುಕೊಳ್ಳುತ್ತಾರೆ. ನಮ್ಮ ಕುತಂತ್ರಿಯಾದ ವಿರೋಧಿಯು ಜನರಿಂದ ದೈವೀಕ ಯುಗಯುಗಾಂತರಗಳ ಯೋಜನೆಗಳನ್ನು ದೂರವಿಡಲು

ಬೆಳಕು ಹೊಳೆಯುದಂತೆ ತಡೆಯಲು ಆತನು ಉತ್ತಮರಾದ, ಬಹಳ ಚುರುಕಾದ, ಬಹಳ ಪ್ರಭಾವಶಾಲಿಯಾದ ದೇವರ ಜನರನ್ನು ಉಪಯೋಗಿಸಿಕೊಳ್ಳಲು ಹುಡುಕುತ್ತಾನೆ.

ಧಾರ್ಮಿಕ ಸಿದ್ಧಾಂತಗಳು ಮಾಡಲು ಪ್ರಾರಂಭವಾದಂದಿನಿಂದ ಕ್ರಿ.ಶ.325 ರಿಂದ 1260 ವರ್ಷಗಳವರೆಗೆ ಕಾರ್ಯತಃವಾಗಿ ಯಾವುದೇ ಸತ್ಯವೇದ ಅಧ್ಯಯನವಿರಲಿಲ್ಲ ಎಂಬುದನ್ನು ಕೆಲವರು ಮಾತ್ರ ಅರಿತುಕೊಳ್ಳುತ್ತಾರೆ. ಆ ಕಾಲಗಳಲ್ಲಿ ಲಕ್ಷಾಂತರಜನರ ಮನಸ್ಸಿನಲ್ಲಿ ಧಾರ್ಮಿಕ ಸಿದ್ಧಾಂತಗಳನ್ನು ನಾಟಿ ಭೀಕರವಾದ ತಪ್ಪುಗಳಲ್ಲಿ ಅವರನ್ನು ಕಟ್ಟಿಹಾಕಿ, ದೈವಿಕ ಗುಣಲಕ್ಷಣಗಳಾದ ಜ್ಞಾನ, ನೀತಿ, ಪ್ರೀತಿ ಮತ್ತು ಶಕ್ತಿಗಳಿಗೆ ಕುರುಡರನ್ನಾಗಿಸಿದರು ಎಂಬುದನ್ನು ಕೆಲವರು ಮಾತ್ರ ಅರಿತುಕೊಳ್ಳುತ್ತಾರೆ. "ಸುಧಾರಣೆ" ಆದಂದಿನಿಂದ – ಜನರ ಕೈಯಲ್ಲಿ ಸತ್ಯವೇದ ಬರಲು ಪ್ರಾರಂಭವಾದಂದಿನಂದ, ಸದುದ್ದೇಶವುಳ್ಳ ಆದರೆ ವಂಚಿಸಲ್ಪಟ್ಟ ಸುಧಾರಕರು, ಹಿಂದಿನ ತಪ್ಪುಗಳಿಂದ ಅಂಧರೂ ಊನರೂ ಆಗಿ ಪ್ರತಿಯಾಗಿ ಅವರು ಜನರನ್ನು ಕತ್ತಲಲ್ಲಿ ಇಡುವ ಕಾರ್ಯ ಮಾಡುತ್ತಿದ್ದಾರೆ ಎಂಬುದನ್ನು ಕೆಲವರು ಮಾತ್ರ ಅರಿಯುತ್ತಾರೆ. ನಿಜವಾದ ಸತ್ಯವೇದ ಅಧ್ಯಯನ ಅಂದರೆ ಅಪೋಸ್ತಲರ ಕಾಲದ ಆದಿ ಸಭೆಯಲ್ಲಿ ಮಾಡುತ್ತಿದ್ದ ರೀತಿಯೂ ಈಗ ಸತ್ಯವೇದ ವಿದ್ಯಾರ್ಥಿಗಳಲ್ಲಿ ಪುನಃ ಬಂದಿದೆ ಎಂಬುದನ್ನು ಕೆಲವರು ಮಾತ್ರ ಅರಿಯುತ್ತಾರೆ.

ಈ ಸಂಪುಟದ ಮುಂಚಿನ ಆವೃತ್ತಿಗಳಲ್ಲಿ "ಮಿಲೇನಿಯಲ್ ಡ್ವಾನ್" ಎಂಬ ಶಿರೋನಾಮೆಯನ್ನು ಬಳಸಲಾಗಿತ್ತು ಆದರೆ ಅದನ್ನು ಕಾದಂಬರಿ ಎಂದು ಆಲೋಚಿಸಿ ಕೆಲವರು ವಂಚನೆಗೊಳಗಾಗುತ್ತಿದ್ದರು. ಯಾರೂ ಕೂಡ ವಂಚನೆಗೊಳಗಾಗದಂತೆ, ಆ ರೀತಿ ಮೋಸಹೋಗಿ ಯಾರೂ ಕೂಡ ಖರೀದಿಸದಂತೆ ನಾವು ನಂತರ "ಸತ್ಯವೇದದ ಅಧ್ಯಯನ"

ಎಂಬ ಪ್ರಸಕ್ತ ಸರಣಿ ಶಿರೋನಾಮೆಯನ್ನು ಆರಿಸಿಕೊಂಡೆವು. ಈಗ ಅದನ್ನು ಯಾರೂ ಅಪಾರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅನೇಕರು ಯಾಕೆ ಈ ಪುಸ್ತಕಗಳು ಪುಸ್ತಕ ಮಾರಾಟದ ಅಂಗಡಿಗಳಲ್ಲಿ ಲಭ್ಯವಿಲ್ಲ ಎಂದು ನಮ್ಮನ್ನು ವಿಚಾರಿಸುತ್ತಾರೆ, ನಮ್ಮ ಉತ್ತರವೇನೆಂದರೆ ಈ ಪುಸ್ತಕದ ಮುದ್ರಣಾಕಾರರು ಅದನ್ನು ಹಾಗೆ ಮಾರಾಟ ಮಾಡಲು ಸಂತೋಷಿಸುತ್ತರಾದರೂ, ಕೆಲವು ಧಾರ್ಮಿಕ ಮತಾಭಿಮಾನಿಗಳು ಬಹಿಷ್ಕರಿಸಲ್ಪಡುವ ಭಯದಿಂದ ಅದನ್ನು ಮಾರಟ ಮಾಡಲು ಅನುಮತಿಸದವರೂ ಇದ್ದಾರೆ. ಮೊದಲಿಗೆ ಇದು ಒಂದು ದೊಡ್ಡ ವಿಪತ್ತಾಗಿ ಪರಿಣಮಿಸಿತು, ಸತ್ಯವನ್ನು ಪ್ರಚಾರಮಾಡಲು ತಡೆಯಲು ವಿರೋಧಿಯ ಬಲವು ಅನುಮತಿಸಲ್ಪಟ್ಟಿದಿಯೋ ಎಂಬಂತೆ ಪರಿಣಮಿಸಿತು. ದೇವರು ಬಹಳ ಸುಂದರವಾಗಿ ಈ ವಿಷಯವನ್ನು ಒಳ್ಳೆದಕ್ಕಾಗಿ ಮಾರ್ಪಡಿಸಿದರು. ಅದರ ನಿಮಿತ್ತ ಇಂದು ಬಹುಶಃ ಯಾವ ಪುಸ್ತಕವೂ ಆಗದಷ್ಟು ಪ್ರಣಮಣದಲ್ಲಿ ಮತ್ತು ನಿರಂತರವಾಗಿ ಈ ಪುಸ್ತಕ ಮಾರಾಟವಾಗುತ್ತಿದೆ.

ಆದಾಗ್ಯೂ ಯಾರು ಪೂರ್ವಕಲ್ಪಿತ ಅಭಿಪ್ರಾಯದಿಂದ ಈ ಪುಸ್ತಕವನ್ನು ಓದಲು ನಿರಾಕರಿಸಿದರೋ ಮತ್ತು ಅದರ ವಿರುದ್ಧ ಹೋರಾಡಿದರೋ, ಹಾಗೆ ಮಾಡಲು ಕಾರಣವೇನೆಂದರೆ ಅವರು ಸುಳ್ಳುಗಳನ್ನು, ತಪ್ಪು ನಿರೂಪಣೆಗಳನ್ನು ನಂಬಿದರು. ಈ ಪುಸ್ತಕಗಳಲ್ಲಿ ಬಹಳಷ್ಟು, ಅದನ್ನು ಓದೇ ಇಲ್ಲದ ಆದರೆ ತಪ್ಪು ನಿರೂಪಣೆಗಳಿಂದ ಪ್ರಭಾವಿತರಾಗಿರುವ ಜನರಿಂದ ಸುಟ್ಟುಹಾಕಲ್ಪಟ್ಟಿದೆ, ಕತ್ತಲೆಯುಗದಲ್ಲಿ ರಕ್ತಸಾಕ್ಷಿಗಳಾಗಿ ಮರಣ ಹೊಂದಿದ ಕ್ರಿಸ್ತನ ಹಿಂಬಾಲಕರ ವಿಷಯದಲ್ಲಿ ಆದಂತೆ ಇದೂ ಸಹ ಆಯಿತು. ಹೌದು ಸ್ವತಃ ಯೇಸುವೇ ಆತನನ್ನು ಮತ್ತು ಆತನ ಬೋಧನೆಯನ್ನು ಅರ್ಥಮಾಡಿಕೊಳ್ಳದೆ ಇದ್ದ ಜನರ ಕೈಯಿಂದ ಹಿಂಸೆ ಅನುಭವಿಸಿದನು, ಇದನ್ನೇ ಅಪೋಸ್ತಲನಾದ ಪೇತ್ರನು ಸೂಚಿಸುತ್ತ ಹೀಗೆ ಘೋಷಿಸುತ್ತಾನೆ "ಸಹೋದರರೇ ಅದಿರಲಿ, ನೀವು ಆ ಕಾರ್ಯವನ್ನು ತಿಳಿಯದೆ ಮಾಡಿದಿರೆಂದು ಬಲ್ಲೆನು; ನಿಮ್ಮ ಅಧಿಕಾರಿಗಳೂ ತಿಳಿಯದೆ ಮಾಡಿದರು." (ಅ.ಕೃ 3:17) "ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ". (1 ಕೊರಿಂಥ 2 : 8)

ಈ ಪುಸ್ತಕದ ಶತ್ರುಗಳು ಕಟುಕರು ಅನೀತಿವಂತರು, ಅಸತ್ಯವಂತರು ಆಗಿದ್ದರೆ ಅದರ ಸ್ನೇಹಿತರು ಅದೇ ಅನುಪಾತದಲ್ಲಿ ಸಹಾನುಭೂತಿಗಳೂ ಮತ್ತು ಉತ್ಸಾಹಿಗಳೂ ಆಗಿದ್ದಾರೆ. ಲಕ್ಷಾಂತರ ಪ್ರತಿಗಳು ಜನರನ್ನು ತಲುಪಿರುವುದು ಈ ಪುಸ್ತಕದ ಸ್ನೇಹಿತರ ಮೂಲಕವೇ, ಅವರು ಸತ್ಯದ ಮೇಲಿನ ಪ್ರೀತಿಯ ನಿಮಿತ್ತ ತಮ್ಮ ಶಕ್ತಿ ಮತ್ತು ಸಮಯವನ್ನು ಈ ಪ್ರತಿಗಳ ಪ್ರಸಾರಕ್ಕಾಗಿ ಕೊಟ್ಟಿದ್ದಾರೆ, ನಾವು ಈ ಸಾಲುಗಳನ್ನು ಬರೆಯುವಲ್ಲಿ, ಸುಮಾರು 600 ಕ್ರೈಸ್ತ ಜನರು ವಿವಿಧ ಉದ್ಯೋಗದಲ್ಲಿರುವವರು, ದೇವರನ್ನು ಮಹಿಮೆಪಡಿಸುವುದಕ್ಕಾಗಿ ಮತ್ತು ಆತನ ಹಸಿದಿರುವ ಸಂತರ ಕೈಗಳಿಗೆ ಈ ಸಣ್ಣ ಸಂಪುಟವನ್ನು ತಲುಪಿಸುವ ಮೂಲಕ ಅವರಿಗೆ ಆಶೀರ್ವಾದ ವುಂಟುಮಾಡುವುದಕ್ಕಾಗಿ ಎಲ್ಲಾ ಭೂಲೋಕದ ವ್ಯವಹಾರಗಳನ್ನು ಮತ್ತು ಕರೆಯುವಿಕೆಗಳನ್ನು ಮತ್ತು ಮಹತ್ವಾಕಾಂಕ್ಷೆಗಳೆಲ್ಲವನ್ನು ಬಿಟ್ಟುಬಿಟ್ಟಿರುತ್ತಾರೆ ಎಂಬುವ

ಸತ್ಯಾಂಶದ ಜ್ಞಾನ ನಮಗಿದೆ. ಇದರಲ್ಲಿ ವೈದ್ಯರು, ಶಾಲಾಶಿಕ್ಷಕರು ಶುಶ್ರೂಕಿಯರು, ಮಂತ್ರಿಗಳು, ಕ್ಷೌರಿಕರು, ಮೆಕ್ಯಾನಿಕ್‌ಗಳು.... ಹೀಗೆ ಆನೇಕ ವೃತಿಯಲ್ಲಿರುವ ಜನರು, ದೇವರ ಪ್ರೀತಿಯಿಂದ ತಮ್ಮ ಹೃದಯಗಳನ್ನು ಸ್ವತಃ ಸ್ಪರ್ಷಿಸಿಕೊಂಡು, ಇತರರ ಹೃದಯಗಳಿಗೆ ಮತ್ತು ಶಿರಗಳಿಗೆ ಈ ಆಶೀರ್ವಾದಗಳನ್ನು ತಲುಪಿಸಲು ಕುತೂಹಲಿಗಳಾಗಿರುವವರು ಸೇರಿದ್ದಾರೆ. ಈ ಪುಸ್ತಕಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಮತ್ತು ಸಾರ್ವಜನಿಕರಿಗೆ ತಲುಪಿಸಲು ಒಯ್ಯುವ ಈ ಮಾರಾಟಗಾರರಿಗೆ ಇದರಿಂದ ಖರ್ಚುವೆಚ್ಚಗಳಿಗೆ ಸಾಕಾಗುವಷ್ಟು ಹಣಸಹ ಬರುವುದಿಲ್ಲ. ಆದರೆ ಕೆಲವೊಮ್ಮೆ ಅವರಿಗೆ ಅಭಾವಗಳಾಗಿದ್ದಾಗ್ಯೂ ಕರ್ತನಿಗಾಗಿ, ಸತ್ಯಕ್ಕಾಗಿ ಮತ್ತು ಸಹೋದರರಿಗಾಗಿ ಕೆಲವು ನಷ್ಟಗಳನ್ನು ಅನಾನುಕೂಲಗಳನ್ನು ಅನುಭವಿಸಲು ಯೋಗ್ಯರೆಂದು ಎಣಿಸಲ್ಪಟ್ಟದಕ್ಕೆ ಎಷ್ಟೋ ಸಂತೋಷಿಸುವವರಾಗಿದ್ದಾರೆ. ಒಳ್ಳೆಯ ಕೆಲಸ ಮುಂದುವರಿಯುತ್ತಾ ಹೋಗುತ್ತಿದೆ, ಕ್ರಿಸ್ತನಲ್ಲಿಯೇ ಜೀವ ಎಂಬ ಸಂದೇಶ ಜನರ ಕೈಯಿಂದ ಕೈಯಿಗೆ ತಲುಪುತ್ತಿದೆ. ಈ ಸಂಪುಟದ ಪ್ರಸ್ತುತ ಫಲ ಅತ್ಯಧಿಕವಾಗಿದೆ. ಮುಂದಿನ ದಿನಗಳಲ್ಲಿ ಅದರ ಆಶೀರ್ವಾದವು ಹಿಂದೆ ಇದ್ದಂತಹ ಅನುಪಾತದಲ್ಲಿಯೇ ಆಗಲಿ. ಲೇಖಕರು ಮತ್ತು ಪ್ರಕಾಶಕರು ಇದಕ್ಕಿಂತ ಹೆಚ್ಚಿನದೇನನ್ನೂ ಕೇಳಲಾರರು.

ಎಲ್ಲಾ ಜನರಿಗೆ ಉತ್ತಮ ಹಾರೈಕೆಗಳೊಂದಿಗೆ,

ಕರ್ತನಲ್ಲಿ ನಿಮ್ಮ ಸೇವಕ
ಚಾರ್ಲ್ಸ್ ಟಿ. ರಸಲ್

ಬ್ರೂಕ್ಲೈನ್, ನ್ಯೂಯಾರ್ಕ್
ಅಕ್ಟೋಬರ್ 1, 1916.

# ಪಾಠಗಳ ಅನುಕ್ರಮಣಿಕೆ / CONTENTS


## ಅಧ್ಯಾಯ – 1

**ಭೂಮಿಯ ಪಾಪದ ರಾತ್ರಿಯು ಹರ್ಷವೆಂಬ ಮುಂಜಾವಿನಲ್ಲಿ ಮುಕ್ತಾಯವಾಗುವುದು.**

ದುಃಖದ ಒಂದು ರಾತ್ರಿ ಮತ್ತು ಹರ್ಷದ ಮುಂಜಾನೆ–ಸತ್ಯವನ್ನು ಹುಡುಕುವ ಎರಡು ವಿಧಾನಗಳು–ಇದರಲ್ಲಿ ಅನುಸರಿಸಲಾಗಿರುವ ವಿಧಾನ–ಕೆಲಸದ ವ್ಯಾಪ್ತಿ–ಸತ್ಯವೇದದ ಭಕ್ತಿಪೂರ್ವ ಅಧ್ಯಾಯನ ಮತ್ತು ಅಪಾಯಕರ ಊಹೆಯ ಅಭ್ಯಾಸದ ನಡುವೆ ಇರುವ ವ್ಯತ್ಯಾಸಗಳು–ಪ್ರವಾದನೆಯ ಉದ್ದೇಶ–ಪ್ರಪಂಚ ಪ್ರಸ್ತುತ ಧಾರ್ಮಿಕ ಸ್ಥಿತಿ ಎರಡು ದೃಷ್ಟಿಕೋನದಿಂದ ಗಮನಿಸಲ್ಪಟ್ಟಿರುವುದು–ಐಗುಪ್ತದ ಕತ್ತಲು–ವಾಗ್ದಾನದ ಬಿಲ್ಲು–ನೀತಿವಂತನ ಮಾರ್ಗ ಪ್ರಗತಿಶೀಲ–ಮಹಾಮತಭ್ರಷ್ಟತೆಗೆ ಕಾರಣ–ಸುಧಾರಣೆ–ಅದೇ ಕಾರಣ ಮತ್ತೊಮ್ಮೆ ನಿಜವಾದ ಪ್ರಗತಿಯನ್ನು ಅಡ್ಡಿಮಾಡುತ್ತದೆ–ಪರಿಪೂರ್ಣ ಜ್ಞಾನವು ಪೂರ್ವ ಕಾಲದ ವಿಚಾರವಲ್ಲ ಆದರೆ ಭವಿಷ್ಯತ್ತಿನ ವಿಷಯವಾಗಿದೆ. ............ 1

## ಅಧ್ಯಾಯ – 2

**ಸರ್ವೋನ್ನತ ಜ್ಞಾನವಂತನಾದ ಸೃಷ್ಟಿಕರ್ತನ ಇರುವಿಕೆಯನ್ನು ಧೃಢಪಡಿಸಲಾಗಿದೆ.**

ಸತ್ಯವೇದ ಹೊರತುಪಡಿಸಿದ ಸಾಕ್ಷಿಗಳು, ವಿಚಾರಗಳ ಬೆಳಕಿನಲ್ಲಿ ಪರೀಕ್ಷಿಸಲಾಗಿದೆ–ಒಂದು ಸಮರ್ಥಿಸಲಾಗದಂತ ಸಿದ್ಧಾಂತ–ಒಂದು ವಿವೇಕಪೂರ್ವಕವಾದ ಸಿದ್ಧಾಂತ–ದೇವರ ಗುಣಲಕ್ಷಣಗಳು ನಿರೂಪಿಸಲಾಗಿದೆ–ವಿವೇಕಪೂರ್ವಕವಾದ ವ್ಯವಕಲನಗಳು. ............ 7

## ಅಧ್ಯಾಯ – 3

**ಸತ್ಯವೇದವು ಒಂದು ದೈವೀಕ ಪ್ರಕಟನೆ ಎಂಬುದನ್ನು ವಿಚಾರಗಳ ಬೆಳಕಿನಲ್ಲಿ ಗಮನಿಸುವುದು.**

ಸತ್ಯವೇದದ ಸಮರ್ಥನೆಗಳು ಮತ್ತು ಅದರ ವಿಶ್ವಾಸಾರ್ಹ ಸಾಕ್ಷಿಗಳು–ಅದರ ಪ್ರಾಚೀನತೆ ಮತ್ತು ಸಂರಕ್ಷಣೆ–ಅದರ ನೈತಿಕ ಪ್ರಭಾವ–ಬರಹಗಾರರ ಉದ್ದೇಶಗಳು–ಬರವಣಿಗೆಯ ಸಾಮಾನ್ಯ ಗುಣಲಕ್ಷಣಗಳು–ಮೋಶೆಯ ಗ್ರಂಥ–ಮೋಶೆಯ ಧರ್ಮಶಾಸ್ತ್ರ–ಮೋಶೆಯಿಂದ ರಚಿಸಲಾದ ಅದು ಪುರೋಹಿತಿಕ ಕ್ರಮವಲ್ಲ–ಲೋಕದ ರಾಜರಿಗೆ ಸೂಚನೆಗಳು–ಕಾನೂನಿನ ಮುಂದೆ ಬಡವ ಹಾಗೂ ಶ್ರೀಮಂತ ಒಂದೇ ಹಂತದಲ್ಲಿದ್ದಾರೆ–ಜನರ ಹಕ್ಕುಗಳನ್ನು ತೊಂದರೆ ಪಡಿಸುವುದರ ವಿರುದ್ಧ ಮುಂಜಾಗ್ರತೆಗಳು–ಯಾಜಕತ್ವ ದಯೆಯನ್ನು ಹೊಂದಿದ ಗುಂಪು ಅಲ್ಲ– ಹೇಗೆ ನೆರವು ಇತ್ಯಾದಿ–ಪರದೇಶಸ್ತರು ವಿಧವೆಯರು, ಅನಾಥರು ಮತ್ತು ಸೇವಕರನ್ನು ದಬ್ಬಾಳಿಕೆ ಮಾಡುವುದ ವಿರುದ್ಧ ರಕ್ಷಣೆ–ಸತ್ಯವೇದದ ಪ್ರವಾದಿಗಳು–ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ಹೊಸ ಒಡಂಬಡಿಕೆ ಬರಹಗಾರರ ನಡುವೆ ಸಾಮಾನ್ಯವಾದ ಐಕ್ಯದ ಬಂಧವಿದೆಯೇ?–ಅದ್ಭುತಗಳು ಅವಿವೇಕಯುತವಾದವುಗಳಲ್ಲ– ವಿವೇಕಪೂರ್ವಕವಾದ ಮುಕ್ತಾಯ. ............ 10

## ಅಧ್ಯಾಯ – 4

**ಕಾಲ ಮತ್ತು ಯುಗಗಳ ದೈವೀಕ ಯೋಜನೆಯ ಅಭಿವೃದ್ಧಿಯಲ್ಲಿ ಗುರುತಿಸಲಾಗಿರವ ವ್ಯವಸ್ಥೆಗಳು**

ದೇವರ ಯೋಜನೆ ಖಚಿತ ಮತ್ತು ಕ್ರಮಬದ್ಧವಾಗಿದೆ–ಪ್ರಪಂಚ ಇತಿಹಾಸದ ಮೂರು ಮಹಾ ಯುಗಗಳು–ಅವುಗಳ ಭಿನ್ನವಾದ ವಿಶೇಷ ಗುಣಲಕ್ಷಣಗಳು–"ಭೂಮಿಯಾದರೋ ಶಾಶ್ವತವಾಗಿ ನಿಲ್ಲುವುದು"–ಮುಂದೆ ಬರುವ ಪ್ರಪಂಚ ಹೊಸ ಆಕಾಶ ಮತ್ತು ಭೂಮಿ–ಈ ಮೂರು ಮಹಾ ಕಾಲಗಳ ಉಪವಿಭಾಗಗಳು–ಹೀಗೆ ದೇವರ ಯೋಜನೆಯ ಮುಖ್ಯವಾದ ಲಕ್ಷಣವನ್ನು ಕಾಣುವಂತೆ ಮಾಡಲಾಗಿದೆ–ಕ್ರಮ ಗುರುತಿಸಲಾಗಿದೆ ಹೊಂದಾಣಿಗೆ ವ್ಯಕ್ತಪಡಿಸಲಾಗಿದೆ–ಸತ್ಯವಾಕ್ಯವನ್ನು ಸರಿಯಾಗಿ ವಿಭಾಗಿಸುವುದು. ............ 20

## ಅಧ್ಯಾಯ – 5

### ಆ ಮರ್ಮವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು; ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ – ಕೊಲೊ–1:26

ಮೊದಲನೆ ವಾಗ್ದಾನದ ಮೊಬ್ಬಾದ ಬೆಳಕು–ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನ–ನಿರೀಕ್ಷೆ ಮುಂದೂಡಲ್ಪಟ್ಟಿದೆ–ಪಂಚಶತ್ತಮದದಿನ ರಹಸ್ಯ ಬಿಡಿಸಿಕೊಳ್ಳುವುದಕ್ಕೆ ಪ್ರಾರಂಭಿಸಿತು–ಆ ಮರ್ಮವು ಏನು? ಯಾಕೇ ಇಷ್ಟು ದೀರ್ಘ ಕಾಲ ಮರೆಯಾಗಿಡಲ್ಪಟ್ಟಿತು?–ಇನ್ನೂ ಲೋಕಕ್ಕೆ ಮರ್ಮವಾಗಿಯೇ ಇದೆ–ಕ್ಲುಪ್ತ ಕಾಲದಲ್ಲಿ ಎಲ್ಲರಿಗೂ ತಿಳಿಯಪಡಿಸಲಾಗುವುದು–ಯಾವಾಗ ಮರ್ಮವು ಪೂರ್ಣವಾಗುತ್ತದೆ. ........................................................................ 26

## ಅಧ್ಯಾಯ – 6

### ನಮ್ಮ ಕರ್ತನ ಬರುವಿಕೆ–ಅದರ ಉದ್ದೇಶ, ಸಮಸ್ತವನ್ನು ಸರಿಪಡಿಸುವಿಕೆ.

ನಮ್ಮ ಕರ್ತನ ಎರಡನೆ ಬರುವಿಕೆ ವೈಯಕ್ತಿಕವಾದದ್ದು ಮತ್ತು ಸಾವಿರವರ್ಷಕ್ಕೂ ಪೂರ್ವವಾದದ್ದು–ಮೊದಲನೆ ಬರುವಿಕೆಯೊಂದಿಗೆ ಅದರ ಸಂಬಂಧ–ಸಭೆಯ ಆರಿಸುವಿಕೆ ಮತ್ತು ಲೋಕದ ಪರಿವರ್ತನೆ–ಆಯ್ಕೆ ಮತ್ತು ಉಚಿತ ಕೃಪೆ–ಸುನೀರೀಕ್ಷೆಯುಟಾದ ಸೆರೆಯವರು–ಸಮಸ್ತವನ್ನು ಸರಿಪಡಿಸುವುದನ್ನು ಕುರಿತು ಪ್ರವಾದನಾ ಸಾಕ್ಷಿ–ನಮ್ಮ ಕರ್ತನ ಬರುವಿಕೆಯು ಸ್ಪಷ್ಟವಾಗಿ ಸಭ ಮತ್ತು ಲೋಕದ ನಿರೀಕ್ಷೆಯಾಗಿದೆ. ........................................................... 30

## ಅಧ್ಯಾಯ – 7

### ಕೆಟ್ಟತನಕ್ಕೆ ಅನುಮತಿ ಮತ್ತು ದೇವರ ಯೋಜನೆಯೊಂದಿಗೆ ಅದರ ಸಂಬಂಧ

ಯಾಕೆ ಕೆಟ್ಟದು ಅನುಮತಿಸಲ್ಪಟ್ಟಿತು–ತತ್ವಗಳಾಗಿ ಸರಿ ಮತ್ತು ತಪ್ಪು–ನೀತಿ ಪ್ರಜ್ಞೆ–ದೇವರು ಕೆಟ್ಟದ್ದನ್ನು ಅನುಮತಿಸಿದರು ಮತ್ತು ಅದನ್ನು ಒಳಿತಾಗುವಂತೆ ಮಾರ್ಪಡಿಸುವನ್ನು–ದೇವರು ಪಾಪಕ್ಕೆ ಕಾರಣನಲ್ಲ–ಆದಾಮನ ವಿಚಾರಣೆ ಕೇವಲ ನಾಟಕವಲ್ಲ–ಆತನ ಶೋಧನೆ ತೀವ್ರವಾಗಿತ್ತು–ಆತನು ಸ್ವ ಇಚ್ಛೆಯಿಂದ ಪಾಪಮಾಡಿದನು–ಪಾಪದ ದಂಡನೆಯು ಅನ್ಯಾಯವಾಗಿಲ್ಲ ಅಥವ ಬಹಳ ಕಠಿಣವೂ ಅಲ್ಲ–ಆದಾಮನಲ್ಲಿ ಎಲ್ಲರನ್ನು ಅಪರಾಧಿಗಳೆಂದು ನಿರ್ಣಯಿಸುವಲ್ಲಿ ಜ್ಞಾನ, ಪ್ರೀತಿ ಮತ್ತು ನೀತಿಯನ್ನು ತೋರ್ಪಡಿಸಲಾಗಿದೆ–ದೇವರ ಕಾನೂನು ಸಾರ್ವತ್ರಿಕವಾದದ್ದು. ................................ 36

## ಅಧ್ಯಾಯ – 8

### ನ್ಯಾಯ ತೀರ್ಪಿನ ದಿನ

ನ್ಯಾಯತೀರ್ವಿಕೆ ದಿನದ ಬಗ್ಗೆ ಸಾಮಾನ್ಯ ಅಭಿಪ್ರಾಯ–ಅದು ಸತ್ಯವೇದಕ್ಕನುಸಾರವಾಗಿದೆಯೇ? ನ್ಯಾಯತೀರ್ಪು ಮತ್ತು ದಿನ ಎಂಬ ಪದಗಳ ಅರ್ಥ ತಿಳಿಸಲಾಗಿದೆ–ಸತ್ಯವೇದದಲ್ಲಿ ಸೂಚಿಸಲಾಗಿರುವ ಅನೇಕ ನ್ಯಾಯತೀರ್ಪಿನ ದಿನಗಳು–ಮೊದಲನೆ ನ್ಯಾಯತೀರ್ಪಿನ ದಿನ ಮತ್ತು ಅದರ ಫಲಿತಾಂಶಗಳು–ಮತ್ತೊಂದು ನೇಮಿಸಲಾಗಿದೆ–ನ್ಯಾಯಾಧೀಶ–ಮುಂಬರುವ ನ್ಯಾಯತೀರ್ಪಿನ ಗುಣಲಕ್ಷಣಗಳು–ಮೊದಲ ಮತ್ತು ಎರಡನೇ ನ್ಯಾಯತೀರ್ಪುಗಳ ಹೊಂದಾಣಿಕೆ ಮತ್ತು ವ್ಯತ್ಯಾಸಗಳು–ಪ್ರಪಂಚ ಪ್ರಸ್ತುತ ಹೊಣೆಗಾರಿಕೆ–ಎರಡು ಮಧ್ಯದಲ್ಲಿರುವ ನ್ಯಾಯತೀರ್ಪುಗಳು ಮತ್ತು ಅದರ ಉದ್ದೇಶಗಳು–ಮುಂಬರುವ ನ್ಯಾಯತೀರ್ಪಿನ ಬಗ್ಗೆ ಬಹಳ ಭಿನ್ನವಾದ ಅಭಿಪ್ರಾಯಗಳು–ಪ್ರವಾದಿಗಳು ಮತ್ತು ಅಪೋಸ್ತಲರು ಅದನ್ನು ಹೇಗೆ ಕಂಡರು? ........................................................................................................ 41

## ಅಧ್ಯಾಯ – 9

### ಈಡುಬಲಿ ಮತ್ತು ಸಮಸ್ತವನ್ನು ಸರಿಪಡಿಸುವಿಕೆ

ಈಡುಬಲಿಯಿಂದ, ಪೂರ್ವಸ್ಥಿತಿಗೆ ತರುವ ಕಾರ್ಯ ಖಾತರಿಯಾಗಿದೆ–ಈಡು ಬಲಿಯಿಂದ ನಿತ್ಯಜೀವವಲ್ಲ ಆದರೆ ಅದಕ್ಕೆ ವಿಚಾರಣೆ ಹೊಂದುವ ಅವಕಾಶದ ಖಾತ್ರಿಯಾಗಿದೇ–ವಿಚಾರಣೆಯ ಉಪಯೋಗಗಳು ಮತ್ತು ಷರತ್ತುಗಳು–ಕ್ರಿಸ್ತನ ತ್ಯಾಗ ಅವಶ್ಯಕ–ಹೇಗೆ ಜನಾಂಗವು ಒಬ್ಬನ ಮರಣದಿಂದ ಬಿಡುಗಡೆ ಹೊಂದಲು ಸಾಧ್ಯ ಮತ್ತು ಹೇಗೆ ಬಿಡುಗಡೆ ಹೊಂದಿತು–ನಂಬಿಕೆ ಮತ್ತು ಕ್ರಿಯೆ ಇನ್ನೂ ಅವಶ್ಯಕವಾಗಿದೆ–ಬೇಕೆಂದು ಪಾಪಮಾಡಿದರೆ ಅದಕ್ಕೆ ಸಂಬಳ ಖಚಿತ–ಪುನರುತ್ಥಾನ ಮಾಡಲ್ಪಡುವ ಲಕ್ಷಾಂತರ ಜನರಿಗೆ ಭೂಮಿಯ ಮೇಲೆ ಸ್ಥಳವಶವಾಗುವುದೇ? ಪೂರ್ವಸ್ಥಿತಿಗೆ ತರುವುದರ ವಿರುದ್ಧ ವಿಕಾಸವಾದ. ........ **45**

## ಅಧ್ಯಾಯ – 10

### ಆತ್ಮಿಕವಾದ ಮತ್ತು ಮಾಂಸಿಕವಾದ ಸ್ವಭಾವಗಳು ಭಿನ್ನವಾಗಿದೆ ಮತ್ತು ಪ್ರತ್ಯೇಕವಾಗಿದೆ.

ಸಾಮಾನ್ಯವಾದ ತಪ್ಪು ತಿಳುವಳಿಕೆಗಳು–ಲೌಕಿಕ ಅಥವ ಮಾಂಸಿಕ ಮತ್ತು ಪರಲೋಕ ಅಥವ ಆತ್ಮೀಕ ಸ್ವಭಾವಗಳು–ಲೌಕಿಕ ಮಹಿಮೆ ಮತ್ತು ಪರಲೋಕ ಮಹಿಮೆ–ಆತ್ಮೀಕ ಜೀವಗಳ ವಿಷಯವಾಗಿ ಸತ್ಯವೇದದ ಸಾಕ್ಷಿ–ಮರ್ತ್ಯತೆ ಮತ್ತು ಅಮರತ್ವ–ಮರ್ತ್ಯ ಜೀವಗಳು ನಿತ್ಯಜೀವ ಹೊಂದಬಹುದೇ? ಅನುಗ್ರಹಗಳನ್ನು ನೀಡುವಾಗ ನ್ಯಾಯಕ್ರಮ ಒಂದು ಊಹಿಸಲ್ಪಟ್ಟ ತತ್ವವನ್ನು ಪರೀಕ್ಷಿಸಲಾಗಿದೆ–ಪರಿಪೂರ್ಣತೆಯಲ್ಲಿ ವೈವಿಧ್ಯತೆ–ದೇವರ ಪರಮ ಹಕ್ಕುಗಳು–ಮನುಷ್ಯರಿಗೆ ದೇವರು ಒದಗಿಸುವಿಕೆಗಳು ಒಂದು ತೃಪ್ತಿಕರವಾದ ಭಾಗ–ಕ್ರಿಸ್ತನ ದೇಹದ ಆರಿಸುವಿಕೆ–ಹೇಗೆ ಅವರ ಸ್ವಭಾವದ ಬದಲಾವಣೆಗಳು ಪರಿಣಮಿಸುತ್ತದೆ/ಉಂಟಾಗುತ್ತದೆ. ........ **52**

## ಅಧ್ಯಾಯ – 11

### ಮೂರು ಮಾರ್ಗಗಳು–ವಿಶಾಲವಾದ ಮಾರ್ಗ, ಇಕ್ಕಟ್ಟಾದ ಮಾರ್ಗ, ರಾಜಮಾರ್ಗ.

ನಾಶನಕ್ಕೆ ಹೋಗುವ ವಿಶಾಲವಾದ ಮಾರ್ಗ–ಜೀವಕ್ಕೆ ಹೋಗುವ ಇಕ್ಕಟ್ಟಾದ ಮಾರ್ಗ–ಜೀವ ಎಂದರೇನು?–ದೈವೀಕ ಸ್ವಭಾವ–ದೈವೀಕ ಮತ್ತು ಮಾನವ ಸ್ವಭಾವಕ್ಕೆ ಇರುವ ಸಂಬಂಧಗಳು–ಇಕ್ಕಟ್ಟಾದ ಮಾರ್ಗದ ಅಂತ್ಯದಲ್ಲಿರುವ ಪ್ರತಿಫಲ–ಉನ್ನತವಾದ ಕರೆಯುವಿಕೆಯು ಸುವಾರ್ತ ಯುಗಕ್ಕೆ ಮಾತ್ರ ಸೀಮಿತವಾಗಿದೆ–ಇಕ್ಕಟ್ಟಾದ ಮಾರ್ಗದ ಕಷ್ಟಗಳು ಮತ್ತು ಅಪಾಯಗಳು–ಪರಿಶುದ್ಧವಾದ ರಾಜಮಾರ್ಗ. ........ **61**

## ಅಧ್ಯಾಯ – 12

### ಯುಗಯುಗಾಂತರಗಳ ಯೋಜನೆಯನ್ನು ಪ್ರತಿನಿಧಿಸುವ ನಕ್ಷೆಯ ವಿವರಣೆ.

ಯುಗಗಳು–ಸುಗ್ಗಿಗಳು–ನಿಜವಾದ ಮತ್ತು ಪರಿಗಣಿಸಲ್ಪಟ್ಟ ಸ್ಥಾನದ ಮಟ್ಟಗಳು–ನಮ್ಮ ಕರ್ತನಾದ ಯೇಸುವಿನ ಜೀವನಗತಿ–ಆತನ ಹಿಂಬಾಲಕರ ಜೀವನಗತಿ–ಹೆಸರಿನ ಕ್ರೈಸ್ತರಲ್ಲಿ ಮೂರು ಗುಂಪುಗಳು–ಸುಗ್ಗಿಯಲ್ಲಿ ಬೇರ್ಪಡಿಸುವಿಕೆ–ಅಭಿಷೇಕಿಸಲ್ಪಟ್ಟ ಗುಂಪು ಮಹಿಮೆಪಡಿಸಲಾಗಿದೆ–ಮಹಾ ಸಂಕಟದ ಗುಂಪು–ಹಣಜಿ ಸುಡಲ್ಪಟ್ಟಿದೆ–ಲೋಕ ಆಶೀರ್ವದಿಸಲ್ಪಟ್ಟಿದೆ–ಫಲಿತಾಂಶ ಮಹಿಮೆಯುಳ್ಳದ್ದಾಗಿದೆ. ........ **67**

## ಅಧ್ಯಾಯ – 13

## ಈ ಲೋಕದ ರಾಜ್ಯಗಳು

ಮೊದಲನೆ ಆಧಿಪತ್ಯ–ಅದನ್ನು ಕಳೆದುಕೊಳ್ಳುವುದು–ಅದರ ವಿಮೋಚನೆ ಮತ್ತು ಪುನಃಸ್ಥಾಪನೆ–ಸಾಂಕೇತಿಕ ದೇವರ ರಾಜ್ಯ–ಪ್ರಸ್ತುತ ಅಧಿಕಾರದ ಎರಡು ಭಾಗಗಳು–ದೇವರಿಂದ ನೇಮಿಸಲ್ಪಟ್ಟ ಅಧಿಕಾರಗಳು–ಅವುಗಳ ಬಗ್ಗೆ ನೆಬೂಕದ್ನೆಚರನ ಅಭಿಪ್ರಾಯ–ದಾನಿಯೇಲನ ಅಭಿಪ್ರಾಯ ಮತ್ತು ಅರ್ಥವಿವರಣೆ–ಈ ಲೋಕದ ರಾಜ್ಯಗಳು ಮತ್ತೊಂದು ದೃಷ್ಟಿಕೋನದಿಂದ ಪರಿಗಣಿಸಿದೆ–ಪ್ರಸ್ತುತ ಸರ್ಕಾರಗಳೊಂದಿಗೆ ಸಭೆಯ ಸರಿಯಾದ ಸಂಬಂಧ–ರಾಜರ ದೈವೀಕ ಅಧಿಕಾರವನ್ನು ಸಂಕ್ಷೇಪ್ತವಾಗಿ ಪರೀಕ್ಷಿಸಲಾಗಿದೆ–ಸುಳ್ಳು ಕ್ರೈಸ್ತರ ಪ್ರತಿಪಾದನೆಗಳು–ಐದನೇ ವಿಶ್ವ ಸಾಮ್ರಾಜ್ಯದಲ್ಲಿ ಒಂದು ಉತ್ತಮ ನಿರೀಕ್ಷೆ. ........... 77

## ಅಧ್ಯಾಯ – 14

## ದೇವರ ರಾಜ್ಯ

ಈ ವಿಷಯದ ಪ್ರಾಮುಖ್ಯತೆ–ರಾಜ್ಯದ ಗುಣಲಕ್ಷಣಗಳು–ಸುವಾರ್ತಯುಗದಲ್ಲಿ ರಾಜ್ಯ–ಪೌಲನಿಂದ ಸರಿಪಡಿಸಲಾಗಿರುವ ತಪ್ಪು ಅಭಿಪ್ರಾಯಗಳು–ರಾಜ್ಯದ ಬಗ್ಗೆ ತಪ್ಪು ಕಲ್ಪನೆಗಳಿಂದಾಗಿರುವ ಫಲಿತಾಂಶಗಳು–ದೇವರ ರಾಜ್ಯದ ಎರಡು ಭಾಗಗಳು–ಆತ್ಮೀಕವಾದ ಭಾಗ ಮತ್ತು ಅದರ ಕೆಲಸಲೋಕದ ಭೂ ಭಾಗ ಮತ್ತು ಅದರ ಕೆಲಸ–ಅವುಗಳ ಹೊಂದಾಣಿಕೆಯಿಂದ ಕಾರ್ಯನಿರ್ವಹಣೆ–ಭೂಲೋಕ ಭಾಗದ ಮಹಿಮೆ–ಪರಲೋಕ ಭಾಗದ ಮಹಿಮೆ–ಈ ಕೊಂಬೆಗಳು ಬೆಳೆಯುವ ಒಡಂಬಡಿಕೆಯ ಬೇರು–ಭೂಲೋಕ ಭಾಗದ ರಾಜ್ಯ, ಇಸ್ರಾಯೇಲ್ಯರು–ಕಳೆದು ಹೊಸ ಕುಲಗಳು–ಪರಲೋಕದ ಯೆರುಸಲೇಮ್–ಇಸ್ರಾಯೇಲ್ಯರು ಒಂದು ಸಾಂಕೇತಿಕ ಜನರು–ಇಸ್ರಾಯೇಲ್ಯರ ನಷ್ಟ ಮತ್ತು ಪುನಃ ಪಡೆದುಕೊಳ್ಳುವುದು–ಆರಿಸಲ್ಪಟ್ಟ ಗುಂಪುಗಳು–ರಾಜ್ಯದ ಭಾದ್ಯಸ್ತರು–ಕಬ್ಬಿಣದ ಆಳ್ವಿಕೆ–ಸಾವಿರ ವರ್ಷದ ಆಳ್ವಿಕೆಯ ಉದ್ದೇಶದ ನಿದರ್ಶನ–ರಾಜ್ಯವನ್ನು ತಂದೆಗೆ ಒಪ್ಪಿಸುವುದು–ದೇವರ ಸಂಕಲ್ಪ ಮೂಲ ಪೂರ್ಣವಾಗಿ ನೇರವೇರುವುದು. ....................... 86

## ಅಧ್ಯಾಯ – 15

## ಯೆಹೋವನ ದಿನ

"ಯೆಹೋವನ ದಿನ", "ಮುಯ್ಯಿ ತೀರಿಸುವದಿನ", "ಕೋಪದ ದಿನ"–ಘೋರವಾದ ಇಕ್ಕಟಿನ ದಿನ–ಅದರ ಕಾರಣ–ಅದರ ಕುರಿತು ಸತ್ಯವೇದದ ಸಾಕ್ಷಿ–ಅದರ ಬೆಂಕಿ ಮತ್ತು ಬಿರುಗಾಳಿ, ಅದರ ಕಂಪನ ಮತ್ತು ಕರಗುವಿಕೆ, ಸಾಂಕೇತಿಕವಾಗಿ ತೋರಿಸಲಾಗಿದೆ–ದಾವೀದನ ಸಾಕ್ಷಿ–ಪ್ರಕಟಿಸುವವನ ಸಾಕ್ಷಿ–ಪ್ರಸ್ತುತ ಪರಿಸ್ಥಿತಿ ಮತ್ತು ಭವಿಷ್ಯತಿನ ದೃಷ್ಟಿಕೋನ, ವಿರೋಧಿಸುವ ಪಕ್ಷಗಳವರು ಕಂಡಂತೆ. .................................................................................................................. 97

## ಅಧ್ಯಾಯ – 16

## ಮುಕ್ತಾಯದ ಮಾತುಗಳು

ಸತ್ಯದ ಬಗ್ಗೆ ನಮ್ಮ ಕರ್ತವ್ಯ..... ಅದರ ವೆಚ್ಚ, ಅದರ ಮೌಲ್ಯ, ಅದರ ಲಾಭ. .......................................... 105